ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶಂಕ್ರವಾರ, ದಿನಾಂಕ ೧೦ನೇ ಜೂನ್ ೧೯೮೮/ಜ್ಯೇಷ್ಠ ೩೦, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೪೫ಕ್ಕೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು (ಶ್ರೀ (ಬಿ. ಆರ್. ಯಾವಗಲ್ ಅವರು) ಪೀಠವನ್ನಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಉಡುಪಿ ತಾಲ್ಲೂಕಿನಲ್ಲಿ ಸೈನಿಕರಿಗೆ ಭೂಮಿ ಮಂಜೂರಾತಿ ಬಗ್ಗೆ

೨೩೭೪. ಶ್ರೀ ಬಸವರಾಜ (ಬ್ರಹ್ಮಾವರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಿಂದ ಉಡುಪಿ ತಾಲ್ಲೂಕಿನಲ್ಲಿ ಭೂಮಿ ಮಂಜೂರಾಗಿರುವ ಸೈನಿಕರ ಮತ್ತು ಮಾಜಿ ಸೈನಿಕರ ಸಂಖ್ಯೆ ಎಷ್ಟು ?

ಆ) ಸದರಿ ಸೈನಿಕರಿಗೆ ಮಂಜೂರಾಗಿರುವ ಭೂಮಿಯು ವಿಸ್ತೀರ್ಣವೆಷ್ಟು ? ನೀಡಿರುವ ಗ್ರಾಮಗಳಾವುವು (ಪಡೆದವರ ಹೆಸರು, ಗ್ರಾಮವಾರು ವಿವರ ನೀಡುವುದು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಕಳೆದ ೩ ವರ್ಷಗಳಿಂದ ಉಡುಪಿ ತಾಲ್ಲೂಕಿನಲ್ಲಿ ಒಟ್ಟು ೧೮ ಸೈನಿಕರಿಗೆ ಮತ್ತು ೧೭ ಜನ ಮಾಜಿ ಸೈನಿಕರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ.

ಆ) ಸದರಿ ಸೈನಿಕರಿಗೆ ಮಂಜೂರಾಗಿರುವ ಭೂಮಿಯ ವಿಸ್ತೀರ್ಣ ಒಟ್ಟು ೫೨-೧೧ ಎಕ್ರೆ ಸೈನಿಕರಿಗೆ ಮತ್ತು ೫೯-೦೭ ಎಕ್ರೆ ಮಾಜಿ ಸೈನಿಕರಿಗೆ ಹಾಗೂ ನೀಡಿರುವ ಗ್ರಾಮಗಳು ವೆರ್ಡೂರು ಆಚಾರ್ಲಾಡಿ, ಪಜಮಂಗೂರು, ನಂಚಾರು, ನಾಲೂರು, ಹಿಲಿಯಾಣ,ಪಡ್ಡರ್ಸೆ ಮತ್ತು ಶಿರೂರು,

(ಪಡೆದವರ ಹೆಸರು, ಗ್ರಾಮವಾರು ವಿವರಗಳು ಅನುಬಂಧ-೧ರಲ್ಲಿ ಲಗತ್ತಿಸಿದೆ)

ಅನುಬಂಧ

ಉಡುಪಿ ತಾಲ್ಲೂಕಿನಲ್ಲಿ ಸೈನಿಕರಿಗೆ ಮಾಜಿ ಸೈನಿಕರಿಗೆ ೧೯೮೫-೮೬ರಿಂದ ಜಮೀನು ಮಂಜೂರಾದ ವಿವರ.

ಗ್ರಾಮ	ಕ್ರಮ ಸಂಖ್ಯೆ	ಹೆಸರು	ಸ. ನಂಬ್ರ	ವಿಸ್ತೀರ್ಣ
೧	೨	೩	೪	೫
		೧೯೮೫-೮೬		
ಪಡುರ್ಲಾರು	೧	ರಮೇಶ್ ರಾವ್	೩೦೬-೪	೩-೯೦
ಅಚ್ಲಾಡಿ	೨	ಸತೀಶ ಶೆಟ್ಟಿಗಾರ	೨೫೪-೧	೨-೪೦
ಪೆಜಮಂಗರು	೩	ಸುಬ್ಬ ಭಂಡಾರಿ	೪೬-೧	೨-೯೦
	೪	ಸೀತಾರಾಮ ದೇವಾಡಿಗ	೯-೧ ಎ ೮	೨-೦೦
				೧೧-೨೦
		ಮಾಜಿ ಸೈನಿಕರು		
ಪಡುರ್ಲಾರು	೧	ವಾದಿರಾಜ ಹೆಗ್ಡೆ	೨೫೪-೧	೨-೮೫
	೨	ವಿಲಿಯಂ ಜಿ. ಕರ್ಕಡ	೬೯-೭	೩-೦೦
				೫-೮೫
		೧೯೮೬-೮೭		
		ಸೈನಿಕರಂ		
ಪಡುರ್ಲಾರಂ	೧	ಪುರುಷೋತ್ತಮ ನಾಯಕ್	೫೨೧-೩	೪-೫೬
	೨	ರಮೇಶ್ ಬಿನ್ ಮಾಡ	೪೯೯-೫	೪-೦೬
ನಲ್ಲೂರು	೩	ವಾಲ್ಟರ್ ಪಿಂಟೊ	೩೮೮-೧	೨-೦೦
	೪	ವಲೇರಿಯನ್ ಡಯಾಸ್	೩೮೮-೧	೨-೦೦
	೫	ರವಿಶಂಕರ	೩೮೬	೫-೨೮
ಹಿಲಿಯಾಣ	೯	ಜರೋಮ್ ವಲೆರಿಸ್	೨೦೨-೧	೩-೩೮
				೨೧-೨೮
ವಡ್ಡರ್ಸೆ	೧	ಶೇಖರ	೨೨-ಬಿ	೧-೨೦
ಪಜಮಂಗೂರು	೨	ನಾರಾಯಣ ದೇವಾಡಿಗ	೯-೧ ಎ೨	೪-೪೫
				೫-೬೫

೧	೨	೩	೪	೫

೧೯೮೭–೮೮

ಸೈನಿಕರು

ಪಣ್ಣೂರು	೧	ಉಪೇಂದ್ರ	೬೯–೪	೩–೦೦
	೨	ಶ್ರೀಧರ	೬೯–೬	೩–೦೦
	೩	ಹೆನ್ರಿಪಿರೇರಾ	೪೦೧–೩	೪–೯೮
	೪	ಎನ್ ಆಂತೋನಿ ಡಿಸೋಜ	೪೮೭–೨	೪–೫೦
	೫	ಸುರೇಶ್ ಕುಮಾರ್	೫೯೦–೩ / ೫೭೪–೩	೩–೭೫
	೬	ಹರಿಶ್ಚಂದ್ರ ಹೆಬ್ಬಾರ್	೪೯೬–೮	೪–೦೦
	೭	ರಂಗನಾಥ ಕದಿಲಾಯ	೫೯–೩	೩–೦೦
	೮	ಸತೀಶ	೧೦–೫	೩–೬೦
				೨೯–೮೩

ಮಾಜಿ ಸೈನಿಕರು

ಪೆರ್ಡೂರು	೧	ಸದಾನಂದ ಸಾಲ್ಯಾನ್	೨೯೭–೧೫	೨–೧೩
	೨	ಶ್ರೀನಿವಾಸ ಕಾಮಂತ್	೨೯೭–೧೬	೨–೧೩
	೩	ಡಿ.ಎಸ್. ನವಲ್‌ಕರ	೪೦೧–೨	೪–೪೩
	೪	ರಂಗನಾಥ ಕೆದಿಲಾಯ	೬೯–೫	೩–೬೦
	೫	ರಮೇಶ್ ರಾವ್	೩೦೪–೧	೪–೧೫
	೬	ತನಿಯ ಶೇರೆಗಾರ	೨೮೦–೨	೩–೬೦
	೭	ಸತೀಶ್ ರಾವ್	೬೯–೨	೩–೨೦
	೮	ಗುರುನಂದನ ಪಡಯೂರ	೨೯೭–೧	೪–೯೦
ಸಂಜಾರು	೯	ವಿಠಲರಾಯ ಕಾಮತ್	೬೯–೧,೨	೩–೦೪
	೧೦	ಸಚ್ಚಿದಾನಂದ ಶರ್ಮ	೧೯೦–೧	೪–೨೦
	೧೧	ಎ.ಐ.ಆರ್. ಫರ್ನಾಂಡೀಸ್	೩೯೧	೩–೩೪
	೧೨	ಎಂ. ದೂಮಪ್ಪ	೭೯–೧	೪–೮೦
ಶಿರೂರು	೧೩	ಸುರೇಶ್ ಪೂಜಾರಿ	೨೨–೨	೪–೮೫
				೪೭–೫೭

ಶ್ರೀ ಬಸವರಾಜ್.—ಸನ್ಮಾನ್ಯ ಉಪಾಧ್ಯಕ್ಷರೇ. ಮಾಜಿ ಸೈನಿಕರಿಗೆ ಜಾಗವನ್ನು ಮಂಜೂರು ಮಾಡುವಾಗ ಇಂಥ ಗ್ರಾಮಗಳಲ್ಲೇ ಕೊಡಬೇಕೆಂದು ನಿಗದಿ ಮಾಡಲಾಗಿದೆಯೋ ಅಥವಾ ಎಲ್ಲಿ ಜಾಗಗಳು ಖಾಲಿ ಇರುತ್ತವೆಯೋ ಅಲ್ಲಿ ಕೊಡಲಾಗುತ್ತಿದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾಜಿ ಸೈನಿಕರು ಜಮೀನುಗಳಿಗೆ ಅರ್ಜಿ ಹಾಕಿದಾಗ ಇಂಥ ಊರಿನಲ್ಲಿ ಜಮೀನು ಖಾಲಿ ಇದೆ ಎಂಬುದನ್ನು ತಿಳಿಸುತ್ತಾರೆ. ಅವರು ತಿಳಿಸಿದ ಜಮೀನುಗಳ ಬಗ್ಗೆ ನಾವು ಎನ್‌ಕ್ವೈರಿ ಮಾಡಿ ಅದನ್ನು ಕೊಡಲಿಕ್ಕೆ ಬರುವಹಾಗಿದ್ದರೆ ಮಂಜೂರು ಮಾಡಿ ಕೊಡುತ್ತೇವೆ.

ಶ್ರೀ ಬಸವರಾಜ್.—ಭೂಮಿಯನ್ನು ದರಾಖಾಸ್ತ್ ಮೂಲಕ ಮಾಜಿ ಸೈನಿಕರಿಗೆ ಕೊಡುವಾಗ ಸರಿಯಾಗಿ ದಾಖಲೆಗಳನ್ನು ನೋಡಿಕೊಡಲಾಗುತ್ತದೆಯೇ ? ನಾನು ಏಕೆ ಕೇಳುತ್ತಿದ್ದೇನೆಂದರೆ, ನಾನು ಎರಡು ಸಂದರ್ಭದಲ್ಲಿ ಮಾಜಿ ಸೈನಿಕರಿಗೆ ಮಂಜೂರು ಮಾಡಿರುವ ಜಾಗಗಳನ್ನು ನೋಡಿದ್ದೇನೆ. ಪಜಮಂಗೂರು ಗ್ರಾಮದಲ್ಲಿ ಮಾಜಿ ಸೈನಿಕರೊಬ್ಬರಿಗೆ ೪ ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ: ಜಾಗವನ್ನು ಮಂಜೂರು ಮಾಡಿದ ಮೇಲೆ ಎರಡು ವರ್ಷಗಳವರೆಗೆ ಆ ಜಾಗವನ್ನು ಆ ಮಾಜಿ ಸೈನಿಕರು ತಮ್ಮ ವಶಕ್ಕೆ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ, ಏಕೆಂದರೆ ಆ ಜಾಗದಲ್ಲಿ ಮರಗಳು ಇದ್ದವು. ೧೪ ಕುಟುಂಬದವರು ಆ ಜಾಗದಲ್ಲಿದ್ದ ಮರಗಳ ಬಗ್ಗೆ ಒಡೆತನವನ್ನು ಇಟ್ಟುಕೊಂಡು ಅವುಗಳನ್ನು ಉಪಯೋಗಿಸುತ್ತಿದ್ದರು. ಇದರಿಂದ ಆ ಸೈನಿಕರು ಆ ಜಾಗವನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿರಲಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೂ ನಾನು ಹೇಳಿದ್ದೆ. ಆದೇ ಸರ್ವೆ ನಂಬರಿನಲ್ಲಿ ಖಾಲಿ ಇರುವ ಜಾಗವನ್ನು.....

ಉಪಾಧ್ಯಕ್ಷರು.—ಪ್ರಶ್ನೆಯನ್ನು ಮಾತ್ರ ಕೇಳಿ.

ಶ್ರೀ ಬಸವರಾಜ್.—ಪ್ರಶ್ನೆಯನ್ನೇ ಕೇಳುತ್ತಿದ್ದೇನೆ ಅಧ್ಯಕ್ಷರೇ. ನಾನು ಹೇಳುವುದೇನೆಂದರೆ, ಆದೇ ಸರ್ವೆ ನಂಬರಿನಲ್ಲಿ ಖಾಲಿ ಇರುವ ಜಾಗವನ್ನು ಆ ಮಾಜಿ ಸೈನಿಕರಿಗೆ ಕೊಡಿ. ಮರವಂಟ್ಟುಗಳು ಇರುವ ಜಾಗವನ್ನು ಆಲ್ಲಿರುವ ಕೃಷಿಕರಿಗೇ ಬಿಟ್ಟುಕೊಡಿ ಎಂದು ಕೇಳಿದ್ದಕ್ಕೆ ಆ ರೀತಿ ಮಾಡದೇ ಮರಗಳು ಇರುವ ಜಾಗವನ್ನು ವಶಪಡಿಸಿಕೊಂಡರು. ಆದೇ ರೀತಿಯಾಗಿ ಸಂಚಾರು ಗ್ರಾಮದ ಸರ್ವೆ ನಂಬರ್ ೬೯ರಲ್ಲಿ ಕೂಡ ಯಾರ್ಯಾರಿಗೋ ಮಂಜೂರಾಗಿದೆ. ಈ ಸೈನಿಕರಿಗೆ ಗಡಿ ಗುರುತಿಸಿ ಕೊಟ್ಟಿರಲಿಲ್ಲ. ಆದೂ ಕೂಡ ಕೃಷಿ ಕಾರ್ಮಿಕರು ವಶಪಡಿಸಿಕೊಂಡಿದ್ದು, ಅವರ ವಶದಲ್ಲಿದೆ. ಆದುದರಿಂದ ಹೀಗೆ ಮಂಜೂರಾತಿ ಮಾಡುವಾಗ ಸ್ಥಳ ಪರಿಶೀಲನೆ ಮಾಡಿ ನಿಗದಿತವಾದ ಭೂಮಿಯಲ್ಲಿ ಇಷ್ಟು ಎಕರೆ ಜಾಗ ಉಂಟೋ ಇಲ್ಲಪ್ಪೋ ಎಂಬುದನ್ನು ಮೊದಲೇ ಗುರುತಿಸಿಕೊಂಡು ಮಂಜೂರಾತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಅತಿಕ್ರಮಣ ಮಾಡಿಕೊಂಡು ಹಲವಾರು ವರ್ಷಗಳಿಂದ ಕೆಲವರು ಇದ್ದರೆ ಅವರಿಗೆ ಸಕ್ರಮ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೀಗೆ ಸೈನಿಕರಿಗೆ ಭೂಮಿ ಮಂಜೂರಾಗಿ ಮಾಡಿ ಕೊಡುವಾಗ ಸ್ಥಳ ಪರಿಶೀಲನೆ ಮಾಡುತ್ತೇವೆ. ತಾವು ಹೇಳಿದಂತೆ ಅದು ಬೇರೆಯವರಿಂದ ಅತಿಕ್ರಮಣವಾಗಿದ್ದಲ್ಲಿ, ಅದು ಕಾಯಿದೆ ಪ್ರಕಾರ ಸರಿ ಎಂದು ಕಂಡು ಬಂದಲ್ಲಿ ಅವರಿಗೆ ಕೊಡುವುದಕ್ಕೆ ಪರಿಶೀಲಿಸುತ್ತೇವೆ. ಅಂತಹ ನಿಯಮಗಳ ಅಡಿಯಲ್ಲಿ ಅತಿಕ್ರಮಣ ಮಾಡಿದವರು ಬಾರದಿದ್ದಲ್ಲಿ ಅದು ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಸವರಾಜ್.—ನಾಲ್ಕೂರು ಗ್ರಾಮದಲ್ಲಿ ಮಂಜೂರು ಮಾಡಿದ ಜಾಗದ ವಿಚಾರವಾಗಿ ನಾನು ಎರಡು ತಿಂಗಳ ಹಿಂದೆ ತಹಶೀಲ್ದಾರರಿಗೆ ಭೇಟಿಯಾಗಿ ವಿಷಯವನ್ನು ತಿಳಿಸಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ ಎರಡು ಜಮೀನುಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಈ ಕುರಿತು ಬಂದಿರುವ ಅರ್ಜಿಗಳು ಎಷ್ಟು, ಮತ್ತು ಎಷ್ಟು ಜನರಿಗೆ ಜಮೀನು ಮಂಜೂರು ಮಾಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಧ್ಯಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ. ವಿವರಗಳನ್ನು ತರಿಸಿ ಅವರಿಗೆ ಕೊಡುತ್ತೇನೆ.